**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.2324/2025**

**ಸಿ.ಡಬ್ಲ್ಯೂ-04**

**ಪಿ.ಡಬ್ಲ್ಯೂ-03**

| | |
|---|---|
| ಸಾಕ್ಷಿಯ ಹೆಸರು | : ಬಾಬು ಜಾಧವ |
| ತಂದೆ/ಗಂಡನ ಹೆಸರು | : ಗಣಪತಿ |
| ವಯಸ್ಸು | : 40 ವರ್ಷ |
| ಉದ್ಯೋಗ | : ಕೂಲಿ |
| ವಾಸಸ್ಥಳ | : ಜೀಗಜಿವಣಗಿ |

**ದಿನಾಂಕ:09-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 1 ನನ್ನ ಮಗ. ಚಾಸಾ 5 ನನ್ನ ಹೆಂಡತಿ. ಚಾಸಾ 6 ನನ್ನ ತಮ್ಮ. ಚಾಸಾ 7 ನನ್ನ ಅಣ್ಣ.

ದಿಃ11.08.2024 ರಂದು ಬೆಳಿಗ್ಗೆ 09.30 ಗಂಟೆಗೆ ನಮ್ಮ ಮನೆಯ ಹತ್ತಿರ ನಾನು ಪತ್ರಾಸ ಶೆಡ್ಡ ಹೊಡೆಯುವ ಸಲುವಾಗಿ ಸಿಮೆಂಟ್ ಕಂಬವನ್ನು ನೆಡುತ್ತಿದ್ದಾಗ ಆರೋಪಿತರೆಲ್ಲರೂ ಹೊಡೆಯಲು ಬಂದಿರುತ್ತಾರೆ. 1 ನೇ ಆರೋಪಿಯು ಬಡಿಗೆಯಿಂದ ತಲೆಗೆ ಹೊಡೆದಿರುತ್ತಾನೆ, 2 ನೇ ಆರೋಪಿಯು ಕಲ್ಲಿನಿಂದ ಭುಜಕ್ಕೆ ಹೊಡೆದಿರುತ್ತಾರೆ. ಉಳಿದ ಆರೋಪಿತರು ಕೈಯಿಂದ ಮತ್ತು ಕಾಲಿನಿಂದ ಹೊಡೆದಿರುತ್ತಾರೆ. ಜಗಳವನ್ನು ಚಾಸಾ 1, 6 ಮತ್ತು 7 ರವರು ಬಿಡಿಸಿದ್ದು ಆರೋಪಿತರು ಆಗ ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಚಡಚಣ ಆಸ್ಪತ್ರೆಗೆ ಹೋಗಿದ್ದು ಅಲ್ಲಿಂದ ವಿಜಯಪುರ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು ಹೆಚ್ಚಿನ ಚಿಕಿತ್ಸೆಗಾಗಿ BLDE ಆಸ್ಪತ್ರೆಗೆ ಹೋಗಿರುತ್ತೇನೆ. ಚಾಸಾ 1 ರವರು ಈ ಕುರಿತು ದೂರನ್ನು ನೀಡಿರುತ್ತಾರೆ. ನಾನು ಈ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಮು.ಮಾ.1 ಮತ್ತು 2 ನ್ನು ನೋಡಿದರೆ ಗುರುತಿಸುತ್ತೇನೆ.

-2-

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಆರ್.ಆರ್.ಕೆ.ವಕೀಲರಿಂದಃ**

ನಾವು ಪೊಲೀಸ್ ಠಾಣೆಗೆ ಘಟನೆ ದಿನ ಹೋಗಿರುತ್ತೇವೆ. ಘಟನೆಯ ದಿನ ಪಿರ್ಯಾದಿಯನ್ನು ನೀಡಿರುತ್ತೇವೆ ಆದರೆ ಪ್ರ.ವ.ವ.ವನ್ನು ಮಾಡಲಿಲ್ಲ. ನಾನು ಚಾಸಾ 1 ರವರ ಜೊತೆ ಘಟನೆಯ ದಿನ

ಪಿರ್ಯಾದಿ ನೀಡಲು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ತುಕಾರಾಜ ಜಾಧವ ಇವರ ನನ್ನ ಚಿಕ್ಕಪ್ಪ ಎಂದರೆ ಸರಿ. 2010 ನೇ ಇಸವಿಯಲ್ಲಿ ನಮ್ಮ ಊರಿನಲ್ಲಿ ಗ್ರಾಮ ಪಂಚಾಯತಿ ಚುನಾವಣೆ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಚಿಕ್ಕಪ್ಪ ತುಕಾರಾಮ ಇವರು ಗ್ರಾಮ ಪಂಚಾಯತಿ ಚುನಾವಣೆಗೆ ಸ್ಪರ್ಧಿಸಿದ್ದರು ಎಂದರೆ ಸರಿ. ತುಕಾರಾಮ ಇವರ ಪರವಾಗಿ ಚುನಾವಣಾ ಸಮಯದಲ್ಲಿ ನಾನು, ಚಾಸಾ 1 ಮತ್ತು ಚಾಸಾ 5 ರಿಂದ 7 ರವರು ಪ್ರಚಾರ ಮಾಡಿದ್ದೇವು ಎಂದರೆ ಸರಿ. 3 ನೇ ಆರೋಪಿಯು ನನ್ನ ಚಿಕ್ಕಪ್ಪ ತುಕಾರಾಮ ಇವರ ವಿರುದ್ಧ ಆಗ ಚುನಾವಣೆಗೆ ನಿಂತದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪ ತುಕಾರಾಮ ಇವರು ಸೊತಿದ್ದರು ಎಂದರೆ ಸರಿ. 3 ನೇ ಆರೋಪಿಯು ಚುನಾವಣೆಯಲ್ಲಿ ಗೆದ್ದು ಗ್ರಾಮ ಪಂಚಾಯತಿ ಅಧ್ಯಕ್ಷ ಆಗಿದ್ದನು ಎಂದರೆ ಸರಿ. ಆ ಸಮಯದಲ್ಲಿ ನಮಗೂ ಮತ್ತು ಆರೋಪಿತರಿಗೂ ವೈಮನಸ್ಸು ನಡೆದಿತ್ತು ಎಂದರೆ ಸಾಕ್ಷಿಯು ಆ ನಂತರ ನಾವು ಒಂದಾಗಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪ ಸೋತಿದ್ದರಿಂದ ಆರೋಪಿತರ ಮೇಲೆ ನಮಗೆ ಸಿಟ್ಟು ಇತ್ತು ಎಂದರೆ ಸರಿಯಲ್ಲ.

ಲಮಾಣಿ ಹಟ್ಟಿಯಲ್ಲಿ ಮರಿಗೆಮ್ಮ ದೇವಿಯ ದೇವಸ್ಥಾನ ಇದೆ ಎಂದರೆ ಸರಿ. ಆ ದೇವಿಯ ಜಾತ್ರೆ ಉತ್ಸವವನ್ನು ಆ ಊರಿನ ಗೌಡರು ಮಾಡುತ್ತಿದ್ದರು ಎಂದರೆ ಸರಿ. ಸದರಿ ಉತ್ಸವವನ್ನು ನಮ್ಮ ಚಿಕ್ಕಪ್ಪ ತುಕಾರಾಮ ರವರು ಮಾಡುತ್ತಿದ್ದರು ಎಂದರೆ ಸರಿ. ಜಾತ್ರೆಯ ಸಲುವಾಗಿ ನಮ್ಮ ಚಿಕ್ಕಪ್ಪ ಹಾಗೂ ಗೌಡರ ನಡುವೆ ಜಗಳವಾಗಿತ್ತು ಎಂದರೆ ಸರಿ. ಆರೋಪಿತರು ಜಾತ್ರಾ ಉತ್ಸವವನ್ನು ಊರಿನ ಗೌಡರು ಮಾಡಲಿ ಎಂದು ಅವರ ಪರವಾಗಿ ಮಾತನಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ವಿಷಯ ನನಗೆ ಗೊತ್ತಿದ್ದರು ಇಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚುನಾವಣೆ ಮತ್ತು ಜಾತ್ರಾ ವಿಷಯವಾಗಿ ನಮಗೂ ಮತ್ತು ಆರೋಪಿತರಿಗೂ ಮನಸಾ ಮನಸಾ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. 6 ನೇ ಆರೋಪಿಯು ನನಗೆ ಕೈಯಿಂದ ಮತ್ತು ಕಾಲಿನಿಂದ ಹೊಡೆದಿರುತ್ತಾನೆ. 6 ನೇ ಆರೋಪಿಯು ನನಗೆ ಕೈಯಿಂದ ಮತ್ತು ಕಾಲಿನಿಂದ ಹೊಡೆದಿರುತ್ತಾನೆ ಎಂದು ನನ್ನ ಹೇಳಿಕೆಯಲ್ಲಿ ಬರೆಸಿರುತ್ತೇನೆ. 6 ನೇ ಆರೋಪಿಯು ನನಗೆ ಕೈಯಿಂದ ಮತ್ತು ಕಾಲಿನಿಂದ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ



ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ, ಪೊಲೀಸ್ ಠಾಣೆಯಲ್ಲಿ ಮತ್ತು ಎಲ್ಲಾ ಕಡೆ ಕೊಟ್ಟಿರುತ್ತೇನೆ. ನಾನು ಪೊಲೀಸರಿಗೆ 2-3 ಸಲ ಕೊಟ್ಟಿರುತ್ತೇನೆ. ದಿಃ11.08.2024 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿತರು ತಿಪ್ಪೆ ಗುಂಡೆಯನ್ನು ಗ್ರಾಮ ಪಂಚಾಯತಿಯ ಜಾಗದಲ್ಲಿ ಹಾಕಿದ್ದರು. ಆರೋಪಿತರು ನನಗೆ ಹೊಡೆಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಹತ್ತಿರ ಇರುವ ಆರೋಪಿತರ ತಿಪ್ಪೆಯನ್ನು ತೆಗೆಯಿಸಬೇಕೆನ್ನುವ

ದುರುದ್ದೇಶದಿಂದ ಅವರು ನನಗೆ ಹೊಡೆಬಡೆ ಮಾಡದೇ ಇದ್ದರು ಸಹ ಸುಳ್ಳು ದೂರನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಮ್ಮ ಮನೆಯ ಅಕ್ಕಪಕ್ಕ ಮನೆಗಳು ಇವೆ ಎಂದರೆ ಸರಿ. ಅಲ್ಲಿ ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ. ಚಾಸಾ 1, 6 ಮತ್ತು 7 ರವರು ನಮ್ಮ ಮನೆಯವರು ಇರುವ ಕಾರಣ ಅವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದು ಹೇಳಿದರೆ ಪ್ರಕರಣಕ್ಕೆ ಅನುಕೂಲವಾಗುತ್ತದೆ ಎಂದು ಅವರು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಗೆ ಹೊದಾಗ ನನಗೆ ಯಾವುದೇ ಗಾಯಪೆಟ್ಟು ಆಗದೇ ಇದ್ದ ಕಾರಣ ಪೊಲೀಸರು ಆ ದಿನ ಪ್ರ.ವ.ವ.ವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾನೇ ಗಾಯಪೆಟ್ಟು ಮಾಡಿಕೊಂಡು ಆ ನಂತರ ಬಂದು ದೂರನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಹೇಳಿಕೆಯನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

.ಶ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**